## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1074 |
| ಸದಸ್ಯರ ಹೆಸರು | ಡಾ|| ಉಮಾಶ್ರೀ (ನಾಮನಿರ್ದೇಶಿತರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.12.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಗಣಿಗಾರಿಕೆ ಮಾಡಲಾಗುತ್ತಿದೆ; ಈ ಗಣಿಗಾರಿಕೆಯಿಂದ ಜಿಲ್ಲೆಯ ಜನರ ಆರೋಗ್ಯದ ಮೇಲೆ ಪರಿಣಾಮ ಬೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಯಾವ ರೀತಿ ಕ್ರಮ ಕೈಗೊಂಡಿದೆ; | • ರಾಜ್ಯದಲ್ಲಿ ಮುಖ್ಯ ಖನಿಜ ಗಣಿಗಾರಿಕೆಯು ಬಳ್ಳಾರಿ, ವಿಜಯನಗರ, ತುಮಕೂರು, ಚಿತ್ರದುರ್ಗ, ರಾಯಚೂರು, ಕಲಬುರಗಿ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉಪಖನಿಜಗಳ ಗಣಿಗಾರಿಕೆ ನಡೆಯುತ್ತಿರುತ್ತದೆ.<br>• ಗಣಿಗಾರಿಕೆಯಿಂದ ಪರಿಸರಕ್ಕೆ ಮತ್ತು ಜನರ ಆರೋಗ್ಯದ ಮೇಲೆ ಉಂಟಾಗುವ ಆಘಾತವನ್ನು ತಡೆಗಟ್ಟುವ ಸಂಬಂಧ ವ್ಯವಸ್ಥಿತ ಮತ್ತು ವೈಜ್ಞಾನಿಕವಾಗಿ ಗಣಿಗಾರಿಕೆ ಮಾಡುವ ಸಂಬಂಧ ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಸರ ಅನುಮತಿ ಪತ್ರ ಪಡೆಯುವುದನ್ನು ಕಾಯ್ದೆ/ ನಿಯಮಗಳಲ್ಲಿ ಕಡ್ಡಾಯಗೊಳಿಸಲಾಗಿದೆ.<br>• ಖನಿಜಗಳ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲು ಕಡ್ಡಾಯವಾಗಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್, ಪರಿಸರ ನಿರ್ವಹಣೆ ಯೋಜನೆ, ಮೈನ್ ಕ್ಲೋಷರ್ ಪ್ಲಾನ್ ನೊಂದಿಗೆ ಪರಿಸರ ಅನುಮತಿ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ಗಣಿಗಾರಿಕೆಗೆ ಅನುಮತಿ ನೀಡಲಾಗುವುದು.<br>• ಮುಖ್ಯ ಖನಿಜಗಳ ಗಣಿಗಾರಿಕೆ ಸಂಬಂಧ ಖನಿಜ ರಿಯಾಯಿತಿ ನಿಯಮಾವಳಿ 2016ರ ನಿಯಮ 13 ರಂತೆ ಗಣಿಗುತ್ತಿಗೆದಾರರು ಕಡ್ಡಾಯವಾಗಿ ಭಾರತ ಸರ್ಕಾರದ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಸಂಸ್ಥೆಯಿಂದ ಅನುಮೋದಿಸಲ್ಪಟ್ಟ ಮೈನಿಂಗ್ ಪ್ಲಾನ್ ರನ್ವಯ ಗಣಿಗಾರಿಕೆಯನ್ನು ನಡೆಸಬೇಕಾಗಿರುತ್ತದೆ. ಪರಿಸರಕ್ಕಾಗುವ ಹಾನಿಯನ್ನು ಕನಿಷ್ಠಗೊಳಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಪಡಿಸಿದ ಕ್ರಮಗಳನ್ನು ಅನುಷ್ಠಾನಗೊಳಿಸದ ಪಕ್ಷದಲ್ಲಿ ಗಣಿಗಾರಿಕೆಯನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ಸಂಸ್ಥೆಯು ಹೊಂದಿದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 05.08.2011ರ ಆದೇಶದಂತೆ, ಬಳ್ಳಾರಿ, ಚಿತ್ರದರ್ಗ, ವಿಜಯನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಕಬ್ಬಿಣದ ಅದಿರಿನ ಗಣಿಗುತ್ತಿಗೆದಾರರು ಪರಿಸರ ಪುನಶ್ಚೇತನ ಕಾರ್ಯವನ್ನು ಕಡ್ಡಾಯಗೊಳಿಸಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಸಮಗ್ರ ಆರ್ & ಆರ್ ಯೋಜನೆಯನ್ನು ಸಿದ್ಧಪಡಿಸಲು ಡೆಹ್ರಾಡೂನಿನ ಐ.ಸಿ.ಎಫ್.ಆರ್.ಇ ಸಂಸ್ಥೆಗೆ ವಹಿಸಿರುತ್ತದೆ. ಅಲ್ಲದೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ **W P No:562/2009** ರ ಆದೇಶ ದಿನಾಂಕ: 28.09.2012 ಮತ್ತು 18.04.2013ರಲ್ಲಿ ಗಣಿ ಬಾಧಿತ ಬಳ್ಳಾರಿ, |

| | | |
|---|---|---|
| | | ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಅಭಿವೃದ್ಧಿಯ ಜೊತೆಗೆ ಪರಿಸರ ಪುನಶ್ಚೇತನ ಯೋಜನೆಗಳು ಹಾಗೂ ರಸ್ತೆಗಳ ಸುಧಾರಣೆ, ಕಾರಿಡಾರ್ ರಸ್ತೆಗಳ ನಿರ್ಮಾಣ, ರೋಪ್ ವೇ, ಕನ್ವೇಯರ್ ಬೆಲ್ಟ್, ಸುಧಾರಿತ ರೈಲ್ವೇ ಲೈನ್‌ಗಳು & ರೈಲ್ವೇ ಸೈಡಿಂಗ್‌ಗಳನ್ನು ಸ್ಥಾಪಿಸುವ ಮೂಲಕ ಪರಿಸರಕ್ಕಾದ ಹಾನಿಯನ್ನು ತಡೆಗಟ್ಟಲು ಉದ್ದೇಶಿಸಿದೆ.<br>• ಅಲ್ಲದೇ, ಸುಸಜ್ಜಿತ ಆಸ್ಪತ್ರೆಗಳು, ತಾಂತ್ರಿಕ ಪರಿಣತಿ ನೀಡುವ ವಿದ್ಯಾ ಸಂಸ್ಥೆಗಳು, ಬಡವರ ಏಳಿಗೆಗಾಗಿ ಹಮ್ಮಿಕೊಳ್ಳಬಹುದಾದ ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ **Special Purpose Vehicle (SPV)** ರಚಿಸಲು ಆದೇಶಿಸಿರುತ್ತದೆ.<br>• ರಾಜ್ಯ ಸರ್ಕಾರವು **Karnataka Mining Environment Restoration Corporation Limited (KMERCL)** ನ್ನು ದಿನಾಂಕ:21.06.2014 ರಂದು ರಚಿಸಿ, ಕಾರ್ಯಕ್ರಮಗಳ ಅನುಷ್ಠಾನಕ್ಕೆ **KMERCL** ವತಿಯಿಂದ ಕ್ರಮವಹಿಸಲಾಗುತ್ತಿದೆ.<br>• ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮ-2016 ರ ನಿಯಮ 18ರಂತೆ, ಡಿ.ಎಂ.ಎಫ್ ರಡಿ ಸಂಗ್ರಹವಾದ ಒಟ್ಟು ನಿಧಿಯಲ್ಲಿ ಶೇಕಡ 10 ರಷ್ಟು ಮೊತ್ತವನ್ನು ದತ್ತಿನಿಧಿಗೆ (ಎಂಡೊಮೆಂಟ್ ಉದ್ದೇಶಗಳಿಗಾಗಿ), ಶೇಕಡ 5 ರಷ್ಟು ಮೊತ್ತವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿರಿಸಿದ ನಂತರ ಉಳಿದ 85% ನಿಧಿಯನ್ನು ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ ಮತ್ತು ಗಣಿಬಾಧಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಕಲ್ಯಾಣ ಯೋಜನೆಗಳಿಗಾಗಿ, ಗಣಿಬಾಧಿತ ಪ್ರದೇಶದಲ್ಲಿನ ಹೆಚ್ಚಿನ ಆದ್ಯತಾ ವಲಯಗಳಿಗೆ ಕನಿಷ್ಠ 60% ಮತ್ತು ಇತರೆ ಆದ್ಯತೆಯ ವಲಯಗಳಿಗೆ ಗರಿಷ್ಠ 40% ಮೀರದಂತೆ ನಿಧಿಯನ್ನು ವಿನಿಯೋಗಿಸಬೇಕಿದೆ.<br>• ಆರೋಗ್ಯ ವಲಯವು ಹೆಚ್ಚಿನ ಆದ್ಯತಾ ವಲಯಗಳಿಗೆ ಸೇರಿದ್ದು, ಆರೋಗ್ಯ ವಲಯದಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಹೊಸ ಸರ್ಕಾರಿ ಆಸ್ಪತ್ರೆಗಳ ನಿರ್ಮಾಣ ಮತ್ತು ಕಟ್ಟಡಗಳ ನವೀಕರಣ, ಸರ್ಕಾರಿ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳ ವಿತರಣೆ, ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ವಿತರಣೆ, ಅರೋಗ್ಯ ಶಿಬಿರ ಮತ್ತು ಇತ್ಯಾದಿ ಕಾಮಗಾರಿಗಳಿಗೆ 2015-16 ರಿಂದ 2025-26 ರ (ಅಕ್ಟೋಬರ್ ಅಂತ್ಯದವರೆಗೆ) ಒಟ್ಟು ರೂ.521.92 ಕೋಟಿ ಕ್ರಿಯಾ ಯೋಜನೆಗಳಿಗೆ 830 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.349.97 ಕೋಟಿ ವೆಚ್ಚಮಾಡಿದ್ದು, 431 ಕಾಮಗಾರಿಗಳು ಪೂರ್ಣಗೊಂಡಿವೆ. |

| | | |
|---|---|---|
| ಆ) | ಗಣಿಗಾರಿಕೆ ಮಾಡುವ ಸಂದರ್ಭದಲ್ಲಿ ಗ್ರಾಮಗಳ ಕೃಷಿ ಭೂಮಿ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರಿಗೆ ಯಾವುದಾದರು ಪರಿಹಾರ ನೀಡಲಾಗಿದೆಯೇ; ಈ ಪರಿಹಾರವನ್ನು ಸರ್ಕಾರವೇ ನೀಡುತ್ತಿದೆಯೇ ಅಥವಾ ಗಣಿಗಾರಿಕೆ ಮಾಡುವ ಸಂಸ್ಥೆಗಳಿಂದಲೇ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ ಪ್ರತಿಯೊಬ್ಬ ರೈತರಿಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ? | • ಗಣಿಗಾರಿಕೆ ನಡೆಸಲು ಕೃಷಿಯೇತರ ಜಮಿನಿನಲ್ಲಿ ಮಾತ್ರವೇ ಗಣಿಗುತ್ತಿಗೆದಾರರಿಗೆ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿರುತ್ತದೆ.<br>• ಗಣಿಗುತ್ತಿಗೆದಾರರು ಜಮೀನಿನ ಪಟ್ಟಾದಾರರಿಂದ ಅನುಮತಿ ಪತ್ರ ಪಡೆದು ಗಣಿಗಾರಿಕೆ ನಡೆಸುವುದು ಕಡ್ಡಾಯವಾಗಿದೆ.<br>• ಒಂದು ವೇಳೆ ಗಣಿಗಾರಿಕೆ ಮಾಡುವ ಸಂದರ್ಭದಲ್ಲಿ ಗ್ರಾಮಗಳ ಕೃಷಿ ಭೂಮಿ ಸಂಪೂರ್ಣವಾಗಿ ಹಾಳಾಗಿರುವುದು **The Minerals (Other Than Atomic And Hydro Carbons Energy Minerals) Concession Rules, 2016** ನಿಯಮ 52 ರ ಪ್ರಕಾರ ಗಣಿಗಾರಿಕೆ ನಡೆಸಲು ಅನುಮತಿ ಪಡೆದವರು ಅಂತಹ ಜಮೀನಿನ ರೈತರಿಗೆ ಪರಿಹಾರ ನೀಡಬೇಕಾಗಿರುತ್ತದೆ. |

ಸಂಖ್ಯೆ: ಸಿಐ -ಎಂಎಂಎನ್/326/2025

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.